> ಊರೆನ್ನುವುದು ಕತೆಗಾರನಿಗಿಂತಲೂ ದೊಡ್ಡದು. ಅದನ್ನು ಸಂಪೂರ್ಣವಾಗಿ ಹಿಡಿಯಲು ಯಾರಿಗೂ ಸಾಧ್ಯವಿಲ್ಲ. ಮುಂಬಯಿಯನ್ನು ಚಿತ್ರಿಸಿದ ಎಲ್ಲಾ ಲೇಖಕರ ಸಮಗ್ರ ಸಾಹಿತ್ಯ ಸೇರಿಸಿದರೂ, ಅದಕ್ಕಿಂತಲೂ ಮುಂಬಯಿ ದೊಡ್ಡದು. ಅವರವರ ಮನೋಧರ್ಮಕ್ಕೆ ತಕ್ಕಂತೆ ಊರು ಕನ್ನಡಿಯಾಗುತ್ತದೆ.

◆ **ಹಾಗಿದ್ದರೆ ಸಾಹಿತ್ಯದಲ್ಲಿ ಕಲ್ಪನೆಯ ಪಾತ್ರವೇನು? ಅದರಲ್ಲೂ ಕತೆ ಹೇಳುವವರಿಗೆ...**

ಪ್ರತಿಯೊಂದೂ ಕಲ್ಪನೆಯೇ. ಕೆಲವೊಮ್ಮೆ ನಮ್ಮ ನಿರ್ಬಂಧದ ತಡೆಗೋಡೆಗಳನ್ನು ಒಡೆದು ಜಗತ್ತನ್ನು ನೋಡಲು ಪ್ರಯತ್ನಿಸುತ್ತೇವೆ. ಆಗದು ಲೇಖಕನ ಕಲ್ಪನಾ ಜಗತ್ತು ಆಗುತ್ತದೆ. ಈ ಕಲ್ಪನೆಗೆ ಸೂಕ್ಷ್ಮತೆ ಇರಬೇಕಾಗುತ್ತದೆ. ಉದಾಹರಣೆಗೆ, ನಮ್ಮದಲ್ಲದ ಪಾತ್ರವನ್ನು ಚಿತ್ರಿಸುತ್ತಿದ್ದೇವೆ ಎಂದುಕೊಳ್ಳಿ. ಅದು ಸುಖಿ ಶ್ರೀಮಂತನ ಪಾತ್ರವೇ ಆಗಿರಲಿ ಅಥವಾ ನಿರ್ಗತಿಕ ಬಡವನ ಪಾತ್ರವೇ ಆಗಿರಲಿ, ಎರಡರ ಚಿತ್ರಣದಲ್ಲೂ ನಿಮಗೆ ಸಾಧ್ಯವಾದಷ್ಟು ಅವರನ್ನು ಅರ್ಥಮಾಡಿಕೊಳ್ಳಬೇಕು. ಅವರನ್ನು ಮಾನವೀಯ ನೆಲೆಯಲ್ಲಿ ನೋಡಬೇಕು. ಅವರ ಶಕ್ತಿ–ದೌರ್ಬಲ್ಯಗಳೆರಡನ್ನೂ ಗಮನಿಸಿ, ಆ ಪಾತ್ರಗಳಲ್ಲಿ ಅವುಗಳನ್ನು ತುಂಬಬೇಕು. ನಮ್ಮ ಕಲ್ಪನೆ ಸ್ವೀಕರಿಸಲು ಅಡ್ಡಿಯಿಲ್ಲ ಎಂದು ಓದುಗನಿಗೆ ಅನ್ನಿಸಬೇಕು. ನಾನು ಗೋವಾದ ಕ್ಯಾಥಲಿಕ್ ಕ್ರಿಶ್ಚಿಯನ್. ಹಾಗಂತ ಅವೇ ಪಾತ್ರಗಳನ್ನು ಚಿತ್ರಿಸಲು ಸಾಧ್ಯವೆ? ನಾನೊಬ್ಬ ಭಾರತೀಯ. ಆದ್ದರಿಂದ ನನ್ನ ಕತೆಗಳಲ್ಲಿ ಹಿಂದೂ, ಮುಸ್ಲಿಂ, ದಲಿತ – ಎಲ್ಲರೂ ಬರಬೇಕಾಗುತ್ತದೆ. ಎಷ್ಟು ಸಹಜವೋ ಅಷ್ಟು ಪಾತ್ರಗಳನ್ನು ಕಟ್ಟಿಕೊಡಬೇಕು. ಅವರನ್ನು ಪೂರ್ತಿ ಚಪ್ಪಟೆ ಮಾಡದೆ, ಉರುಟಾಗಿಸಬೇಕು.

◆ **ಮುಂದಿನ ಪ್ರಶ್ನೆಗೆ ಹೊರಳುವ ಮುನ್ನ ಇದಕ್ಕೆ ಸಂಬಂಧಿಸಿದ ಮತ್ತೊಂದು ಚಿಕ್ಕ ಪ್ರಶ್ನೆ. ನೀವು ಚಿತ್ರಿಸಿರುವ, ನಿಮ್ಮ ಮನಸ್ಸಿನಲ್ಲಿರುವ ಮುಂಬಯಿ ಮತ್ತು ನಿಮಗೆ ನಿತ್ಯ ಕಾಣುವ ಮುಂಬಯಿ ಒಂದೇ ಅನ್ನಿಸುತ್ತಾ?**

ಇಲ್ಲ. (ನಗು) ಅದು ನಾನು ಕಂಡಿರುವ ಮುಂಬಯಿ. ಊರೆನ್ನುವುದು ಕತೆಗಾರನಿಗಿಂತಲೂ ದೊಡ್ಡದು. ಅದನ್ನು ಸಂಪೂರ್ಣವಾಗಿ ಹಿಡಿಯಲು ಯಾರಿಗೂ ಸಾಧ್ಯವಿಲ್ಲ. ಮುಂಬಯಿಯನ್ನು ಚಿತ್ರಿಸಿದ ಎಲ್ಲಾ ಲೇಖಕರ ಸಮಗ್ರ ಸಾಹಿತ್ಯ ಸೇರಿಸಿದರೂ, ಅದಕ್ಕಿಂತಲೂ ಮುಂಬಯಿ ದೊಡ್ಡದು. ಅವರವರ ಮನೋಧರ್ಮಕ್ಕೆ ತಕ್ಕಂತೆ ಊರು ಕನ್ನಡಿಯಾಗುತ್ತದೆ.

◆ **ನೀವು ಸಾಕಷ್ಟು ಮರಾಠಿ ಮತ್ತು ಕೊಂಕಣಿ ಸಾಹಿತ್ಯವನ್ನು ಇಂಗ್ಲೀಷಿಗೆ ಯಶಸ್ವಿಯಾಗಿ ಅನುವಾದ ಮಾಡಿರುವಿರಿ. ದೇಶೀ ಭಾಷೆಯ ಜಗತ್ತು ನಿಮಗೆ ಗೊತ್ತಿದೆ. ಇಂಗ್ಲೀಷಲ್ಲದೆ ಆರು ಭಾಷೆಗಳನ್ನು ಕರಗತ ಮಾಡಿಕೊಂಡಿರುವಿರಿ. ಈ ಭಾಷಾ ಪ್ರೀತಿಯ ಬಗ್ಗೆ ಹೇಳಿ.**

ನಾನು ಹಿಂದೂ ಅಲ್ಲ. ಆದರೂ ಈ ದೇಶದ ನೂರಾರು ಭಾಷೆಗಳು ನಮಗೆ ಸರಸ್ವತಿ ಮಾತೆ ಕೊಟ್ಟ ಕೊಡುಗೆ ಅಂತ ಹೇಳಲು ಇಷ್ಟಪಡುತ್ತೇನೆ. ಅವುಗಳನ್ನು ಜತನದಿಂದ ಕಾಪಾಡುವುದು ನಮ್ಮ ಧರ್ಮ. ನಾವು ಆ ಜವಾಬ್ದಾರಿ ನಿರ್ವಹಿಸದಿದ್ದರೆ ಬೇರೆ ಯಾರೋ ಅದರ ಮಾಲೀಕತ್ವ ವಹಿಸುತ್ತಾರೆ ಅಥವಾ ಅವು ನಶಿಸುತ್ತವೆ. ಒಮ್ಮೆ ಭಾಷೆ ಸತ್ತ ಮೇಲೆ ನಾವು ಕೇವಲ ಅದರ ಪಂಚನಾಮೆ ಮಾಡಬಹುದು. ಆ ಭಾಷೆಯಲ್ಲಿ ಏನೆಲ್ಲಾ ಇತ್ತು ಎಂದು ಅಕಡೆಮಿಕ್ ಆಗಿ ಕೆಲಸ ಮಾಡಬಹುದು. ಅದರ ನಿಘಂಟು ತಯಾರಿಸುವುದು, ಆ ಸಾಹಿತ್ಯದ ಸಮಾಜಶಾಸ್ತ್ರ, ತತ್ವಶಾಸ್ತ್ರ ಇತ್ಯಾದಿ ಅಧ್ಯಯನಗಳನ್ನು ಮಾಡಬಹುದು. ಆದರೆ ಸತ್ತ ಭಾಷೆಯನ್ನು ಗಂಭೀರವಾಗಿ ತೆಗೆದುಕೊಂಡು ಯಾವ ಲೇಖಕನೂ ಒಂದು ಹೊಸ ಕಾದಂಬರಿಯನ್ನು ಬರೆಯುವ ಸಾಹಸ ಮಾಡುವುದಿಲ್ಲ. ಆ ಭಾಷೆ ಮತ್ತೆ ಬೆಳೆಯುವುದಿಲ್ಲ, ಜೀವಿಸುವುದಿಲ್ಲ. ನಮಗೆ ಬೇಕಿರುವುದು ಅದೇನಾ? ನನಗೆ ಅಚ್ಚರಿಯಾಗುವುದೇನೆಂದರೆ, ನಮ್ಮ ಯುವಕರು